**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.</u>**

**ಅಪರಾಧ ಪ್ರಕರಣ ಸಂಖ್ಯೆಃ 502/2022**

| | | |
|---|---|---|
| **ಸಾಕ್ಷಿಯ ಹೆಸರು** | ಇಂದ್ರಾಣಿ | ಚಾಸಾ-2 |
| **ತಂದೆಯ ಹೆಸರು** | ಮಣಿಕಂಠ | |
| **ಉದ್ಯೋಗ** | ಗೃಹಿಣಿ | ಪ್ರಾಸಾ-2 |
| **ವಾಸ ಸ್ಥಳ** | ಸಿಗೋಡು | |
| **ದಿನಾಂಕಃ 09.10.2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**<u>ಮುಖ್ಯ ವಿಚಾರಣೆಃ</u>** ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ

2ನೇ ಆರೋಪಿ ನನ್ನ ಗಂಡ. 02 ವರ್ಷಗಳ ಹಿಂದೆ ನಾನು ಮತ್ತು 2ನೇ ಆರೋಪಿ ದ್ವಿಚಕ್ರ ವಾಹನದಲ್ಲಿ ಬೈಕ್ ನಲ್ಲಿ ಹೋಗುತ್ತಿದ್ದೇವು. 2ನೇ ಆರೋಪಿ ವಾಹನ ಚಾಲನೆ ಮಾಡುತ್ತಿದ್ದರು ನಾನು ಹಾಗೂ ಇಬ್ಬರು ಮಕ್ಕಳು ಹಿಂದೆ ಕುಳಿತ್ತಿದ್ದೇವು. ಸಾಲಗೇರಿ ಬಳಿ ಹೋಗುತ್ತಿದ್ದಾಗ 1ನೇ ಆರೋಪಿ ಬಂದು ನಮಗೆ ಡಿಕ್ಕಿ ಪಡಿಸಿರುತ್ತಾರೆ. ಆಗ ನನ್ನ ಎಡಕಾಲು ಮುರಿದಿರುತ್ತದೆ. 2ನೇ ಆರೋಪಿಗೆ ತಲೆಗೆ ಪೆಟ್ಟಾಗಿತ್ತು. ಆ ಕಾಲಕ್ಕೆ ನನಗೆ ಪ್ರಜ್ಞೆ ಇರಲಿಲ್ಲ. ನಮ್ಮನ್ನು ಅರಕಲಗೂಡು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. 1ನೇ ಆರೋಪಿಯ ತಪ್ಪಿನಿಂದ ಸದರಿ ಅಪಘಾತವಾಗಿರುತ್ತದೆ. ಈ ವಿಚಾರವಾಗಿ ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

**<u>ಪಾಟೀ ಸವಾಲುಃ</u>** ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ.

ದಿಃ 11.02.22 ರಂದು ನಾನು , 2ನೇ ಆರೋಪಿ ಹಾಗೂ ನಮ್ಮ ಮಕ್ಕಳು ನನ್ನ ಮಾವನಿಗೆ ಸೇರಿದ ಕೆಎ-12-ಇಪಿ-1328 ವಾಹನದಲ್ಲಿ ಸಿಗೋಡು ಗ್ರಾಮದ ನನ್ನ ತಾಯಿ ಮನೆಗೆ ಹೋಗುತ್ತಿದ್ದೇವು ಎಂದರೆ ಸರಿ. ಆ ಕಾಲಕ್ಕೆ ರಾ. 8.00 ಗಂಟೆಗೆ 1ನೇ ಆರೋಪಿ ಕೆಎ-13-ಇಎಂ-1100 ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ನಮ್ಮ ವಾಹನಕ್ಕೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿ. 2ನೇ ಆರೋಪಿ ಹಾಗೂ 1ನೇ ಆರೋಪಿ ವಾಹನಗಳು ಮುಖಾ ಮುಖಿ ಡಿಕ್ಕಿ ಆಗಿದ್ದರಿಂದ ಸದರಿ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿಯು 1ನೇ ಆರೋಪಿ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಪಘಾತದಿಂದಾಗಿ 2ನೇ ಆರೋಪಿಯ ಬಲ ಮಂಡಿಗೆ , ತಲೆಗೆ , ಎಡ ಭಾಗದ ಪಕ್ಕೆಗೆ

ಹಾಗೂ ಮೈ ಕೈಗೆ ಪೆಟ್ಟಾಗಿರುತ್ತದೆ ಮತ್ತು ನನಗೆ ಎಡಕಾಲಿನ ಮಂಡಿ , ಕಾಲಿಗೆ ಹಾಗೂ ಮೈ ಕೈಗೆ ಪೆಟ್ಟಾಗಿರುತ್ತದೆ ಎಂದರೆ ಸರಿ. ಈ ರೀತಿಯಾಗಿ ನಾನು ಸದರಿ ವಿಚಾರವಾಗಿ ನಾನು ಪೋಲೀಸರಿಗೆ 12.02.22 ರಂದು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು **ಶ್ರೀ. ಜಿ ಜಿ ಆರ್** ರವರಿಂದ. - ಇಲ್ಲಾ

**ಮರುವಿಚಾರಣೆ - ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ. ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು.**
**ಅರಕಲಗೂಡು**